## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
## ಮೊಳಕಾಲ್ಮುರು.

ಉಪಸ್ಥಿತರು :- ಶ್ರೀ ಶ್ರೀಶೈಲ ಬಿ.ಬಾಗಡಿ,
ಬಿ.ಕಾಂ., ಎಲ್‌ಎಲ್.ಬಿ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಮೊಳಕಾಲ್ಮುರು.

ದಿನಾಂಕ 13ನೇ ಡಿಸಂಬರ್, 2017 ರಂದು.

ಅಮಲ್‌ಜಾರಿ ಪ್ರಕರಣ.ನಂ.36/2011

*ಡಿಕ್ರಿಧಾರಕರು* :- ಶ್ರೀ ಬಿ.ಸಿದ್ದಪ್ಪ ಬಿನ್ ಲೇಟ್ ಗುಡಿಹಳ್ಳಿ ಬೋರಯ್ಯ,
ವಯಸ್ಸು 75 ವರ್ಷ,
ಉದ್ಯೋಗ ನಿವೃತ್ತ ಕೋರ್ಟ್ ಶಿರಸ್ತೇದಾರ್
ದೊಡ್ಡ ಉಳ್ಳಾರ್ತಿ ಗ್ರಾಮ, ತಳಕು ಹೋಬಳಿ,
ಚಳ್ಳಕೆರೆ ತಾಲ್ಲೂಕು

(ಡಿಕ್ರಿದಾರಕರ ಪರ ವಕೀಲರು ಶ್ರೀ.ಎಲ್.ಪಿ.ಪಿ)

*ವಿರುದ್ಧ*

*ತೀರ್ಪುಋಣಿದಾರರು* :- 1. ಶ್ರೀಮತಿ ಗೌರಮ್ಮ ಕೋಂ.ಲೇ.ಪೂಜಾರಿ
ಓಬಳೇಶಯ್ಯ,
ವಯಸ್ಸು 48 ವರ್ಷ,

2. ಶ್ರೀ ಬೋರಯ್ಯ ಬಿನ್ ಲೇ ಪೂಜಾರಿ
ಓಬಳೇಶಯ್ಯ
ವಯಸ್ಸು 30 ವರ್ಷ,

3. ಶ್ರೀ.ಪಾಲಯ್ಯ @ ಮುನಿಯಪ್ಪ ಬಿನ್
ಕುಂಟ ಓಬಳೇಶಯ್ಯ
ವಯಸ್ಸು 50 ವರ್ಷ,

4. ಶ್ರೀ.ಓಬಳೇಶಿ ಬಿನ್ ಪಾಲಯ್ಯ
ವಯಸ್ಸು 25 ವರ್ಷ

(ತೀರ್ಪುಋಣಿದಾರರು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದು ಎಲ್ಲರೂ ದೊಡ್ಡ ಉಳ್ಳಾರ್ತಿ ಗ್ರಾಮ ತಳಕು ಹೋಬಳಿ, ಚಳ್ಳಕೆರೆ ತಾಲ್ಲೂಕಿನಲ್ಲಿ ವಾಸವಾಗಿರುತ್ತಾರೆ).

13/12/12

**ದಿವಾನಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 21 ನಿಯಮ 32 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ**

1. ಡಿಕ್ರಿದಾರಕರು ಈ ಪ್ರಸ್ತುತ ಅಮಲ್ ಜಾರಿ ಪ್ರಕರಣವನ್ನು ತೀರ್ಪುಋಣಿದಾರರ ವಿರುದ್ದ ಅಸಲು ದಾವಾ ನಂ.88/2003 ರಲ್ಲಿ ಆದಂತಹ ಶಾಶ್ವತ ನಿರ್ಬಂದಕಾಜ್ಞೆ ಆದೇಶವನ್ನು ಉಲ್ಲಂಘನೆ ಮಾಡಿದಕ್ಕಾಗಿ ಸಲ್ಲಿಸಿರುತ್ತಾರೆ.

2. ಅಮಲ್‌ಜಾರಿ ಅರ್ಜಿಯ ಪ್ರಮುಖ ಅಂಶಗಳು:

ಡಿಕ್ರಿದಾರಕರು ತೀರ್ಪುಋಣಿದಾರರ ವಿರುದ್ದ ದಾವಾ ಆಸ್ತಿಯ ಮೇಲಿನ ತಮ್ಮ ಶಾಂತಿಯುತ ಸ್ವಾಧೀನ ಅನುಭವಕ್ಕೆ ಅಡ್ಡಿ ಆತಂಕಪಡಿಸಬಾರದೆಂದು ಶಾಶ್ವತ ನಿರ್ಭಂಧಾಕಾಜ್ಞೆ ಕೋರಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.88/2003 ರನ್ನು ದಾಖಲಿಸಿದ್ದರು. ಸದರಿ ದಾವೆಯು ಡಿಕ್ರಿದಾರಕರ ಪರ ದಿನಾಂಕ:15.03.2007 ರಂದು ಆದೇಶವಾಗಿದ್ದು, ಸದರಿ ಆದೇಶದ ವಿರುದ್ದ ತೀರ್ಪುಋಣಿದಾರರು ಮಾನ್ಯ ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯ, ಚಳ್ಳಕೆರೆಯಲ್ಲಿ ಆರ್.ಎ.ನಂ.50/2007 ನ್ನು ದಾಖಲಿಸಿದ್ದರು. ಮೇಲ್ಮನವಿ ನ್ಯಾಯಾಲಯವು ಅಧೀನ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ದಿನಾಂಕ:09.06.2010 ರಂದು ತೀರ್ಪುಋಣಿದಾರರು ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ಆದಂತಹ ಆದೇಶದ ವಿರುದ್ದ ತೀರ್ಪುಋಣಿದಾರರು ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರಿನಲ್ಲಿ ದ್ವಿತೀಯ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಕೆಳ ನ್ಯಾಯಾಲಯವು ಅಸಲುದಾವೆ ನಂ.88/2003 ರಲ್ಲಿ ದಿನಾಂಕ:15.03.2007 ರಂದು ಮಾಡಿದಂತಹ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಊರ್ಜಿತವಾಗಿರುತ್ತದೆ. ಹೀಗಿರುವಾಗ ಈ ಪ್ರಕರಣದ ತೀರ್ಪುಋಣಿದಾರರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ದಿನಾಂಕ:14.11.2010 ರಂದು ದಾವಾ ಆಸ್ತಿಯ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿ ಶೇಂಗಾ ಹೊಟ್ಟಿನ ಬಣವೆಯನ್ನು ಹಾಕಿರುತ್ತಾರೆ. ಈ ರೀತಿಯಾಗಿ ದಾವಾ ಆಸ್ತಿಯನ ಮೇಲಿನ ಡಿಕ್ರಿದಾರಕರ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸಿರುತ್ತಾರೆ. ಈ ಕುರಿತು ಸ್ಥಳೀಯ ತಳಕು ಪೋಲಿಸ್ ಠಾಣೆಗೆ ದಿನಾಂಕ:29.11.2010 ರಂದು ದೂರನ್ನು ನೀಡಿದ್ದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಅದೇ ರೀತಿಯಾಗಿ ಇನ್ನೊಂದು ಸಲ ದಿನಾಂಕ:17.02.2011 ರಂದು ಪುನ: ದೂರನ್ನು ದಾಖಲಿಸಿದಾಗ ತಳಕು ಪೋಲೀಸ್ ಠಾಣೆಯವರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ನ್ಯಾಯಾಲಯವು ದಿನಾಂಕ:15.03.2007 ರಂದು ಮಾಡಿದ ಶಾಶ್ವತ ಪ್ರತಿಬಂಧಕಾಜ್ಞೆ ಆಧೇಶವನ್ನು ತೀರ್ಪುಋಣಿದಾರರು ಉಲಂಘನೆ ಮಾಡಿದ್ದರಿಂದ ಅವರನ್ನು ಸಿವಿಲ್ ಬಂಧಿಖಾನೆಗೆ ಕಳುಹಿಸಲು ಮತ್ತು ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರಿ ಈ ಪ್ರಸ್ತುತ ಅಮಲ್ ಜಾರಿ ಪ್ರಕರಣವನ್ನು ದಾಖಲಿಸಿರುತ್ತಾರೆ.

3. ತೀರ್ಪುಋಣಿದಾರರು ನ್ಯಾಯಾಲಯದ ನೋಟೀಸ್ ಜಾರಿಯಾದ ಮೇರೆಗೆ ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ವಿಸ್ತೃತವಾದ

13/12/12

ತಮ್ಮ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ತೀರ್ಪುಋಣಿದಾರರು ತಮ್ಮ ಲಿಖಿತ ತಕರಾರಿನಲ್ಲಿ ಹೇಳಿರುವ ಪ್ರಮುಖವಾದ ಅಂಶಗಳೇನೆಂದರೆ ನ್ಯಾಯಾಲಯವು ಮಾಡಿದ ಆದೇಶವು ಕೇವಲ ಕಾಗದದ ಮೇಲೆ ಬರೆದಂತಹ ಆದೇಶವಾಗಿದ್ದು, ಅದನ್ನು ಅಮಲ್‌ಜಾರಿ ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಅದೇ ರೀತಿಯಾಗಿ ದಾವಾ ಆಸ್ತಿಯು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೂ ಸಹ ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ತನ್ನ ಹೆಸರಿನಲ್ಲಿ ದಾವಾ ಆಸ್ತಿ ಇದೆ ಎಂದು ಸುಳ್ಳು ಪಂಚಾಯಿತಿ ದಾಖಲೆಗಳನ್ನು ಸೃಷ್ಟಿಸಿಕೊಂಡು ತನ್ನ ಪರವಾಗಿ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ಹೇಳಿ ಶಾಶ್ವತ ನಿರ್ಭಂಧಕಾಜ್ಞೆ ಆದೇಶವನ್ನು ಪಡೆದಿರುತ್ತಾನೆ. ಒಂದು ವೇಳೆ ದಾವಾ ಆಸ್ತಿಯು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದರೆ, ಅದನ್ನು ಡಿಕ್ರಿದಾರಕರು ಅನುಭವಿಸಿಕೊಂಡು ಹೋಗಲು ತನಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾನೆ. ಡಿಕ್ರಿದಾರಕನು ನ್ಯಾಯಾಲಯದ ನಿವೃತ್ತಿ ಸಿಬ್ಬಂಧಿ ಆಗಿರುವುದರಿಂದ ಹಾಗೂ ನ್ಯಾಯಾಲಯದ ಕಾರ್ಯಕಲಾಪಗಳ ಬಗ್ಗೆ ಸಂಪೂರ್ಣ ಜ್ಞಾನ ಇರುವುದರಿಂದ ತೀರ್ಪುಋಣಿದಾರರಿಗೆ ತೊಂದರೆ ಕೊಡಲು ಸುಳ್ಳು ದಾಖಲೆಗಳ ಆಧಾರದ ಮೇಲೆ ನಿರ್ಬಂಧಕಾಜ್ಞೆ ಡಿಕ್ರಿಯನ್ನು ಪಡೆದಿದ್ದು ಸದರಿ ಡಿಕ್ರಿ ಕಾಗದದ ಮೇಲೆ ಬರೆದಿರುವ ಡಿಕ್ರಿ ಆಗಿರುವುದರಿಂದ ಅದನ್ನು ಅಮಲ್‌ಜಾರಿಗೆ ಒಳಪಡದ ಡಿಕ್ರಿ ಆಗಿರುವುದರಿಂದ ಡಿಕ್ರಿಧಾರಕನು ಈ ಪ್ರಕರಣದಲ್ಲಿ ಕೇಳಿರುವಂತೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ, ಆದ್ದರಿಂದ ಡಿಕ್ರಿಧಾರಕನು ಸಲ್ಲಿಸಿದ ಈ ಪ್ರಸ್ತುತ ಅಮಲ್‌ಜಾರಿ ಪ್ರಕರಣವನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾನೆ.

4. ಡಿಕ್ರಿದಾರಕನು ತನ್ನ ಪ್ರಕರಣವನ್ನು ಸಾಬೀತುಪಡಿಸಲು ತನ್ನನ್ನು ಪಿ.ಡಬ್ಲ್ಯೂ 1 ಎಂದು ವಿಚಾರಣೆ ಮಾಡಿಕೊಂಡಿದ್ದು, ತನ್ನ ಪರ ನಿಪಿ 1 ರಿಂದ 8 ದಾಖಲೆಗಳನ್ನು ನಿಶಾನೆಗೊಳಿಸಿಕೊಂಡಿರುತ್ತಾನೆ. ತೀರ್ಪುಋಣಿದಾರನು ಸಹ ತನನ್ನು ಆರ್.ಡಬ್ಲ್ಯೂ 1 ಎಂದು ವಿಚಾರಣೆ ಮಾಡಿಕೊಂಡಿದ್ದು, ತನ್ನ ಪರ ನಿಡಿ ಆರ್.1 ರಿಂದ ನಿಡಿ.ಆರ್.5 ಎಂದು ದಾಖಲೆಗಳನ್ನು ನಿಶಾನೆಗೊಳಿಸಿಕೊಂಡಿರುತ್ತಾನೆ. ಉಭಯ ಪಕ್ಷಗಾರರು ತಮ್ಮ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

5. ಉಭಯಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು ಹಾಗೂ ಕಡತವನ್ನು ಪರಿಶೀಲಿಸಿದಾಗ ಈ ಕೆಳಕಂಡಂತೆ ಅಂಶಗಳು ನ್ಯಾಯಾಲಯದ ಮುಂದೆ ಉದ್ಭವವಾಗುತ್ತದೆ.

ಅಂಶ 1. ಡಿಕ್ರಿಧಾರಕನು ತನ್ನ ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರವನ್ನು ಪಡೆಯಲು ಅರ್ಹನೇ?

ಅಂಶ 2. ಏನು ಆದೇಶ?

6. ಉಭಯ ಪರ ಪಕ್ಷದಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಹಾಗೂ ಉಭಯಪರ ವಕೀಲರ

13/4/12

ವಾದವಿವಾದವನ್ನು ಆಲಿಸಿದಾಗ ಈ ಮೇಲೆ ಹೇಳಿದ ಅಂಶಗಳಿಗೆ ಈ ಕೆಳಗಿನಂತೆ ಉತ್ತರ ನೀಡಿರುತ್ತೇನೆ.

ಅಂಶ 1. ನಕಾರಾತ್ಮಕವಾಗಿ

ಅಂಶ 2. ಅಂತಿಮ ಆದೇಶದಂತೆ ಈ ಕೆಳಗೆ ಹೇಳಿದ ಕಾರಣಗಳಿಗಾಗಿ

<u>**ಕಾರಣಗಳು**</u>

7. <u>ಅಂಶ ನಂ.1</u> ಡಿಕ್ರಿದಾರಕನು ಅಸಲು ದಾವಾ ನಂ.88/2003 ರಲ್ಲಿ ತೀರ್ಪುಋಣಿದಾರರ ವಿರುದ್ಧ ತನ್ನ ಶಾಂತಿಯುತ ಸ್ವಾಧೀನ ಅನುಭವಕ್ಕೆ ಅಡ್ಡಿ ಆತಂಕ ಪಡಿಸಬಾರದೆಂದು ಶಾಶ್ವತ ನಿರ್ಭಂಧಾಕಾಜ್ಞೆ ಡಿಕ್ರಿಯನ್ನು ಪಡೆದಿರುತ್ತಾನೆ. ಡಿಕ್ರಿಧಾರಕನು ಸಲ್ಲಿಸಿದ ಅಮಲ್‌ಜಾರಿ ಪ್ರಕರಣದಲ್ಲಿ ಇರುವ ಷೆಡ್ಯೂಲ್ ಆಸ್ತಿ ಈ ಕೆಳಗಿನಂತೆ ಇರುತ್ತದೆ.

<u>**ಷೆಡ್ಯೂಲ್**</u>

ಚಳ್ಳಕೆರೆ ತಾಲ್ಲೂಕು ತಳಕು ಹೋಬಳಿ ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿರುವ ಖಾಲಿ ನಿವೇಶನ ಖಾತೆ ನಂ.1072 ರ ವಿಸ್ತೀರ್ಣ ಪೂ-ಪ 102 ಅಡಿ, (34 ಗಜ) ಉ-ದ 60 ಅಡಿ(20 ಗಜ) ಉಳ್ಳ ಖಾಲಿ ಜಾಗಕ್ಕೆ ಚಕ್ಕುಬಂದಿ:

ಪೂರ್ವಕ್ಕೆ : ಬೋರಮ್ಮನ ಮಗ ಬಸಯ್ಯನ ಈಗ ಹಾಲಿ ಪಾಲಯ್ಯ ಯಾನೆ ಮುನಿಯಪ್ಪ ಇವರ ಜಾಗ

ಪಶ್ಚಿಮಕ್ಕೆ : ಕುರುಬರ ಕರಿಯಣ್ಣನ ಜಮೀನು

ಉತ್ತರಕ್ಕೆ : ಮುಕ್ಕಡಿ ಓಬಳೇಶಯ್ಯನ ಜಾಗ

ದಕ್ಷಿಣಕ್ಕೆ : ಕಲ್ಯಾಣಪ್ಪನ ಮಗ ಓಬಯ್ಯನ ಜಾಗ

8. ಈ ಮೇಲೆ ಹೇಳಿರುವ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿಯು ದಾವಾ ಆಸ್ತಿಯಾಗಿರುತ್ತದೆ. ಈ ದಾವಾ ಆಸ್ತಿಯಲ್ಲಿ ತೀರ್ಪುಋಣಿದಾರರು ಅಕ್ರಮವಾಗಿ ಪ್ರವೇಶ ಮಾಡಿ ಶೇಂಗಾ ಹೊಟ್ಟಿನ ಬಣವೆಯನ್ನು ಹಾಕಿರುತ್ತಾರೆಂದು ಈ ಪ್ರಸ್ತುತ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಡಿಕ್ರಿದಾರಕನು ತನ್ನ ಪ್ರಕರಣವನ್ನು ಸಾಬೀತು ಪಡಿಸಲು ನಿಪಿ 6 ರಂತೆ ಇರುವ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ ಇವರು ಮೇಲ್ಮನವಿ ನಂ.40/2012 ರಲ್ಲಿ ದಿನಾಂಕ:04.04.2013 ರಂದು ಮಾಡಿದ ಆದೇಶದಲ್ಲಿ ಡಿಕ್ರಿಧಾರಕನ ಪರವಾಗಿ ಮಾಡಿರುವ ಶಾಶ್ವತ ನಿರ್ಬಂದಕಾಜ್ಞೆ ಆದೇಶವು ಮತ್ತು ಸದರಿ ಆಧೇಶವನ್ನು ಪುರಸ್ಕರಿಸಿದ ಮೇಲ್ಮನವಿ ನ್ಯಾಯಾಲಯವು ಮಾಡಿದ ಆಧೇಶವು ಕಾನೂನಿನ ವಿರುದ್ಧ ಮತ್ತು ವಾಸ್ತವಾಂಶವನ್ನು ಸರಿಯಾಗಿ ಪರಿಗಣಿಸದೇ ಮಾಡಿದ ಆದೇಶವಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅದೇ ರೀತಿಯಾಗಿ ಸದರಿ ಆದೇಶದ ಪುಟ ಸಂಖ್ಯೆ 27 ರ ಪ್ಯಾರಾ ನಂ.22 ರಲ್ಲಿ ಮಾನ್ಯ ನ್ಯಾಯಾಧೀಶರು ಡಿಕ್ರಿಧಾರಕನು ಪಡೆದಂತಹ ಆದೇಶವು ಮತ್ತು ಮಾನ್ಯ ಮೇಲ್ಮನವಿ ನ್ಯಾಯಾಲಯ ಮಾಡಿದ ಆದೇಶವು ಡಿಕ್ರಿಧಾರಕನ ಹಕ್ಕನ್ನು ಪ್ರತಿಪಾದನೆ ಮಾಡಿದೆ ಆದರೂ ಅದೇ

13/12/14

ಮೇಲ್ಮನವಿ ನ್ಯಾಯಾಲಯ ಡಿಕ್ರಿಧಾರಕರು ಮತ್ತು ಅವರ ಸಂಬಂಧಿಕರು ಸಲ್ಲಿಸಿದ ಪಾಲು ವಿಭಾಗ ದಾವೆಯನ್ನು ವಜಾ ಮಾಡಿರುವುದು ಕಾನೂನಿನ ವಾಸ್ತವಿಕತೆಯನ್ನು ಮರೆತು ಮಾಡಿದಂತಹ ಆದೇಶವಾಗಿರುತ್ತದೆ. ಕಾರಣ ಡಿಕ್ರಿದಾರಕನು ದಾವಾ ಸ್ವತ್ತು ತನಗೆ ಖಾತೆಯಾಗಿದೆ ಎಂದು ಪ್ರತಿಪಾದನೆ ಮಾಡಿದ್ದು ಆದರೆ ಸದರಿ ಆಸ್ತಿಯು ತೀರ್ಪುಋಣಿದಾರರ ಮತ್ತು ಡಿಕ್ರಿದಾರಕರ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದು ಸರ್ವೇ ನಂ.3 ಒಟ್ಟು 13 ಎಕರೆ 32 ಗುಂಟೆ ಜಮೀನಿನ ಒಂದು ಭಾಗವಾಗಿದ್ದು, ಒಟ್ಟು 13 ಎಕರೆ 32 ಗುಂಟೆ ಜಮೀನಿನ ಪೈಕಿ 3 ಎಕರೆ ಜಮೀನನ್ನು ಪೋಡುಗಳಾಗಿ ವಿಂಗಡಿಸಿ ಮಾರಾಟ ಮಾಡಿದ್ದು ಉಳಿದ 9 ಎಕರೆ 21 ಗುಂಟೆ ಜಮೀನು ಡಿಕ್ರಿಧಾರಕರ ಮತ್ತು ತೀರ್ಪುಋಣಿದಾರರ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಅದೇ ರೀತಿಯಾಗಿ ಡಿಕ್ರಿದಾರಕನು ದಾವಾ ಆಸ್ತಿಯು ದೊಡ್ಡ ಉಳ್ಳಾರ್ತಿ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ತೀರ್ಪುಋಣಿದಾರರು ದಾವಾ ಆಸ್ತಿಯು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಲು ತಾಲ್ಲೂಕು ಸರ್ವೇಯರನ್ನು ನೇಮಿಸಲಾಗಿದ್ದು, ಅವರು ದಿನಾಂಕ:03.09.2017 ರಂದು ತಮ್ಮ ವರದಿಯನ್ನು ನೀಡಿದ್ದು, ಸದರಿ ವರದಿಯ ಪ್ರಕಾರ ಖಾತೆ ನಂ.1072 ನಿವೇಶನವು ಸರ್ವೇ ನಂ.3 ರಲ್ಲಿ ಬರುವ ನಿವೇಶನವಾಗಿದ್ದು, ಸದರಿ ನಿವೇಶನವು ತೀರ್ಪುಋಣಿದಾರರ ಅನುಭವದಲ್ಲಿ ಇರುತ್ತದೆ ಎಂದು ವರದಿ ನೀಡಿರುತ್ತಾರೆ. ಆದ್ದರಿಂದ ಡಿಕ್ರಿಧಾರಕನು ತನ್ನ ಪರ ಡಿಕ್ರಿ ಮಾಡಿದ ನಂತರ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

9. ಅದೇ ರೀತಿಯಾಗಿ ತೀರ್ಪುಋಣಿದಾರರು ನಿಡಿ ಆರ್.1 ರಂತೆ ಮಾನ್ಯ ಚಳ್ಳಕೆರೆ ನ್ಯಾಯಾಲಯದಲ್ಲಿ ದಾಖಲಿಸಿರುವ ಅಸಲು ದಾವೆ ನಂ.16/2010 ರ ವಾದಪತ್ರವನ್ನು ಹಾಗೂ ಸದರಿ ಪ್ರಕರಣದಲ್ಲಿ ಡಿಕ್ರಿದಾರಕನು ಪ್ರತಿವಾದಿ ನಂ.6 ಇದ್ದು ತೀರ್ಪುಋಣಿದಾರರು ಪ್ರತಿವಾದಿ ನಂ.1 ರಿಂದ 3 ಇರುತ್ತಾರೆ. ಸದರಿ ಪ್ರಕರಣದಲ್ಲಿ ಪ್ರತಿವಾದಿ ನಂ. 6 (ಡಿಕ್ರಿದಾರಕನು) ತನ್ನ ಲಿಖಿತ ತಕರಾರನ್ನು ಸಲ್ಲಿಸಿ ಅದರಲ್ಲಿ ದಿನಾಂಕ:10.01.1985 ರಂದು ಸರ್ವೇ ನಂ. 3 ರಲ್ಲಿ ತಾನು ಜಮೀನನ್ನು ಖರೀದಿಸಿದ್ದು, ಆ ಪ್ರಕಾರ ಪಂಚಾಯಿತಿಯಲ್ಲಿ ಖಾತೆಯಾಗಿರುತ್ತದೆ ಎಂದು ಪ್ರತಿಪಾದನೆ ಮಾಡಿರುತ್ತಾನೆ ಹಾಗೂ ತಾನು ಖರೀದಿಸಿದ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದು, ಅದರಲ್ಲಿ ಪಾಲು ಕೇಳಲು ಬರುವುದಿಲ್ಲ ಎಂದು ಪ್ರತಿಪಾದನೆ ಮಾಡಿದ್ದು, ಆದರೆ ಮಾನ್ಯ ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯ ಡಿಕ್ರಿದಾರಕನ ಪ್ರತಿಪಾದನೆಯನ್ನು ತಳ್ಳಿ ಹಾಕಿ ಆ ಪ್ರಕರಣದಲ್ಲಿ ಕೇಳಿರುವಂತೆ ಪಾಲು ವಿಭಾಗದ ಪ್ರಾಥಮಿಕ ಡಿಕ್ರಿ ಮಾಡಿರುತ್ತಾರೆ. ಮಾನ್ಯ ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯನ ಅಸಲು ದಾವೆ ನಂ.16/2010 ರಲ್ಲಿ ದಿನಾಂಕ:23.05.2012 ರಂದು ಆದೇಶ ಮಾಡಿದ್ದು, ಸದರಿ ಆಧೇಶದ ವಿರುದ್ಧ ಡಿಕ್ರಿದಾರಕನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ ದಲ್ಲಿ ಮೇಲ್ಮನವಿ ನಂ.40/2012 ನ್ನು

13/12/12

ಸಲ್ಲಿಸಿದ್ದನು. ಆದರೆ ಮಾನ್ಯ ಜಿಲ್ಲಾ ನ್ಯಾಯಾಲಯವು ಡಿಕ್ರಿಧಾರಕನ ವಾದವನ್ನು ತಳ್ಳಿ ಹಾಕಿ ಮೇಲ್ಮನವಿಯನ್ನು ವಜಾ ಮಾಡಿರುತ್ತದೆ.

10. ಮಾನ್ಯ ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯ ಅಸಲು ದಾವೆ ನಂ.16/2010 ರಲ್ಲಿ ಮಾಡಿದ ಆದೇಶದ ಅನ್ವಯ ದಾವಾ ಆಸ್ತಿಯ ಮೇಲೆ ಡಿಕ್ರಿಧಾರಕನಿಗೆ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ ತಾನು ಅಸಲು ದಾವೆ ನಂ.88/2003 ರಲ್ಲಿ ಪಡೆದಂತಹ ಶಾಶ್ವತ ನಿರ್ಬಂದಾಕಾಜ್ಞೆ ಆದೇಶದ ಮೇಲೆ ತೀರ್ಪುಋಣಿದಾರರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಬರುವುದಿಲ್ಲ. ಅದೇ ರೀತಿಯಾಗಿ ನ್ಯಾಯಾಲಯದ ಆಯುಕ್ತರು ನೀಡಿದ ವರದಿಯ ಪ್ರಕಾರ ದಾವಾ ಆಸ್ತಿಯಲ್ಲಿ ತೀರ್ಪುಋಣಿದಾರರು ಸ್ವಾಧೀನಾನುಭವದಲ್ಲಿ ಇರುವುದರಿಂದ ಈ ಪ್ರಸ್ತುತ ಅಮಲ್‌ಜಾರಿ ಪ್ರಕರಣವು ಊರ್ಜಿತವಲ್ಲದ ಪ್ರಕರಣವಾಗಿರುವುದರಿಂದ ಡಿಕ್ರಿದಾರಕನು ಈ ಪ್ರಸ್ತುತ ಅರ್ಜಿಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದು ಪರಿಗಣಿಸಿ ಅಂಶ ನಂ.1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

<u>11. ಅಂಶ ನಂ.2</u> ಈ ಮೇಲಿನ ಚರ್ಚೆ ಮತ್ತು ಕಾರಣಗಳಿಂದ ಈ ಕೆಳಗಿನಂತೆ ಮಾಡಿದ ಆದೇಶ.

## <u>ಆದೇಶ</u>

ಡಿಕ್ರಿದಾರಕನು ದಿವಾನಿ ಪ್ರಕ್ರಿಯೆಯ ಸಂಹಿತೆ ಕ್ರಮಾದೇಶ 21 ನಿಯಮ 32 ರ ಅಡಿಯಲ್ಲಿ ಸಲ್ಲಿಸಿದ ಅಮಲ್ ಜಾರಿ ಪ್ರಕರಣವನ್ನು ಖರ್ಚು ಸಮೇತ ವಜಾ ಮಾಡಲಾಗಿರುತ್ತದೆ.

(ಬೆರಳಚ್ಚುಗಾರರನು ನನ್ನ ಆದೇಶವನ್ನು ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ನನ್ನಿಂದ ತಿದ್ದುಪಡಿ ಮಾಡಿ, ಇಂದು ದಿನಾಂಕ 13 ನೇ ಡಿಸಂಬರ್ 2017 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು).

13/12/17

(ಶ್ರೀ ಶ್ರೀಶೈಲ ಬಿ.ಬಾಗಡಿ)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಮೊಳಕಾಲ್ಮೂರು

## <u>ಪರಿಚ್ಛೇದ</u>

1) <u>ಡಿಕ್ರಿದಾರಕನ ಪರ ವಿಚಾರಣೆ ಮಾಡಿದ ಸಾಕ್ಷಿದಾರರು</u> :-

ಪಿಡಬ್ಲ್ಯೂ-1 - ಬಿ.ಸಿದ್ದಪ್ಪ ಬಿನ್ ಲೇಟ್ ಗುಡಿಹಳ್ಳಿ ಬೋರಯ್ಯ

ಪಿಡಬ್ಲ್ಯೂ-2 - ಓಬಳೇಶಯ್ಯ ಬಿನ್ ಕಾವಲು ನಿಂಗಯ್ಯ

13/12/17

2) ಡಿಕ್ರಿದಾರಕನ ಪರ ಗುರ್ತಿಸಲಾದ ದಾಖಲಾತಿಗಳು :

| | | |
|---|---|---|
| ನಿಶಾನೆ.ಪಿ.1 | - | ಅಸಲು ದಾವೆ ನಂ.88/2003ರ ಡಿಕ್ರಿಯ ಧೃಢೀಕೃತ ನಕಲು |
| ನಿಶಾನೆ.ಪಿ.2 | - | ಮೇಲ್ಮನವಿ ನಂ.50/2007 ರ ಡಿಕ್ರಿಯ ಧೃಢೀಕೃತ ನಕಲು |
| ನಿಶಾನೆ.ಪಿ.3 & 4 | - | ಪೋಲೀಸರು ನೀಡಿದ ಹಿಂಬರಹ |
| ನಿಶಾನೆ.ಪಿ.5 | - | ಭಾವಚಿತ್ರ |
| ನಿಶಾನೆ.ಪಿ.6 &7 | - | ಮೇಲ್ಮನವಿ ನಂ.40/2012 ಆದೇಶ ಮತ್ತು ಡಿಕ್ರಿಯ ಧೃಢೀಕೃತ ನಕಲುಗಳು |
| ನಿಶಾನೆ.ಪಿ.8 | - | ಮೌಲ್ಯಮಾಪನ ಪಟ್ಟಿಯ ಧೃಢೀಕೃತ ನಕಲು |

3) ತೀರ್ಪುಋಣಿದಾರರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು :

| | |
|---|---|
| ಆರ್.ಡಬ್ಲ್ಯೂ.1 | ಪಾಲಯ್ಯ ಬಿನ್ ಲೇಟ್ ಕುಂಟ ಓಬಳೇಶಯ್ಯ |

4) ತೀರ್ಪುಋಣಿದಾರರ ಪರ ಹಾಜರುಪಡಿಸಿದ ದಾಖಲಾತಿಗಳು :

| | |
|---|---|
| ನಿಡಿ ಆರ್.1 | ಅಸಲು ದ್ರಾವೆ ನಂ.16/2010 ರ ರೋಜುನಾಮೆಯ ದೃಡೀಕೃತ ನಕಲು |
| ನಿಡಿ ಆರ್.2 & ಆರ್.3 | ಅಸಲು ದಾವೆ ನಂ.16/2010 ರ ವಾದಪತ್ರ ಮತ್ತು ಪ್ರತಿವಾದ ಪತ್ರದ ದೃಡೀಕೃತ ನಕಲು |
| ನಿಡಿ ಆರ್.4 &5 | ಅಸಲು ದಾವೆ ನಂ.16/2010 ರ ಡಿಕ್ರಿ ಮತ್ತು ಆದೇಶದ ದೃಡೀಕೃತ ನಕಲು |

5) ಈ ಪ್ರಕರಣದಲ್ಲಿ ನ್ಯಾಯಾಲಯದ ಪರವಾಗಿ ಹಾಜರುಪಡಿಸಿದ ದಾಖಲೆಗಳು ದಿನಾಂಕ:03.09.2017 ರಂದು ನ್ಯಾಯಾಲಯ ಆಯುಕ್ತರು ನೀಡಿದ ವರದಿ

13/12/12

(ಶ್ರೀಶೈಲ ಬಿ.ಬಾಗಡಿ)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಮೊಳಕಾಲ್ಮುರು.